ಸಂಪಾದಕೀಯ

# ಶ್ರೀಮಾತೆಯವರ ದಿವ್ಯಸ್ಮರಣೆ



ಡಿಸೆಂಬರ್ ತಿಂಗಳು ಬಂತೆಂದರೆ ಶ್ರೀಮಾತೆ ಶಾರದಾದೇವಿಯವರ ಜಯಂತಿ ಹತ್ತಿರವಾಗುತ್ತಿದೆ; ಶ್ರೀರಾಮಕೃಷ್ಣ-ವಿವೇಕಾನಂದ ಭಾವಧಾರೆಯ ಭಕ್ತರಿಗೆಲ್ಲ ಉತ್ಸವದ ದಿನಗಳು ಆರಂಭವಾಗುತ್ತಿವೆ. ದಿವ್ಯ ಪ್ರೇಮ, ವಾತ್ಸಲ್ಯ, ಕರುಣೆ, ಕೃಪೆ — ಈ ಭಾವಗಳೇ ಮೈವೆತ್ತು ಬಂದಂತಿರುವ ಶ್ರೀಮಾತೆಯವರ ವ್ಯಕ್ತಿತ್ವದ ಹಲವು ಮುಖಗಳನ್ನು ನೆನೆಯುವುದೇ ಒಂದು ಧ್ಯಾನದಂತೆ; ಅದು ನಮ್ಮ ಅಂತರಂಗ, ಬಹಿರಂಗಗಳನ್ನು ಪವಿತ್ರಗೊಳಿಸುತ್ತದೆ. ದೈನಂದಿನ ವ್ಯವಹಾರಗಳಲ್ಲಿ, ನಾನಾ ಬಗೆಯ ಜಂಜಾಟಗಳಲ್ಲಿ ಮುಳುಗಿ, ಆಯಾಸಗೊಂಡು ಮನೆಗೆ ಮರಳಿ ಬಂದ ಸಾಮಾನ್ಯ ವ್ಯಕ್ತಿಯೊಬ್ಬ ವಿಶ್ರಾಂತಿ ಪಡೆಯಲು ಆರಾಮ ಕುರ್ಚಿಗೋ, ಸೋಫಾಗೋ ಒರಗಿಕೊಂಡು ಕುಳಿತಾಗ ಶ್ರೀಮಾತೆಯವರ ಈ ಮಾತುಗಳನ್ನು ನೆನೆಪಿಸಿಕೊಳ್ಳಲಿ:

''ನಾನು ದುಷ್ಟರಿಗೂ ತಾಯಿ, ಗುಣವಂತರಿಗೂ ತಾಯಿ. ಹೆದರಬೇಡ; ಕಷ್ಟದಲ್ಲಿದ್ದಾಗಲೆಲ್ಲ ನಿನ್ನಷ್ಟಕ್ಕೆ ಹೇಳಿಕೋ, 'ನನಗೊಬ್ಬಳು ತಾಯಿ ಇದ್ದಾಳೆ' ಅಂತ.''

ದಣಿದ ಜೀವಕ್ಕೆ ಅಪಾರ ಸಾಂತ್ವನ, ಶಾಂತಿ, ನೆಮ್ಮದಿ ನೀಡುವ ಜಗನ್ಮಾತೆಯ ನುಡಿಗಳಿವು. ಯಾರ ಪವಿತ್ರ ಜೀವನದ, ಶುದ್ಧ ವ್ಯಕ್ತಿತ್ವದ ಒಂದು ಕ್ಷಣದ ನೆನಪು ನಮ್ಮ ಮೈ-ಮನಗಳನ್ನು ಪರಿಶುದ್ಧಗೊಳಿಸುವುದೋ, ನಮ್ಮ ಅಂತರಂಗದಲ್ಲಿ ಭಕ್ತಿ, ಪ್ರೇಮ, ಪಾವಿತ್ರ್ಯಗಳ ತರಂಗಗಳನ್ನು ಎಬ್ಬಿಸುವುದೋ ಅಂತಹ ವಿಶ್ವಜನನಿಯ ಬದುಕು ಅನಂತ ಸಾಗರದಂತೆ. ಅದರ ಒಂದೊಂದು ಅಲೆಗಳೂ ಅವರ ವ್ಯಕ್ತಿತ್ವದ ವಿಭಿನ್ನ ಮುಖಗಳು. ಅವುಗಳಲ್ಲಿ ಕೆಲವೇ ಅಲೆಗಳನ್ನು ಸ್ಪರ್ಶಿಸುವ ಪ್ರಯತ್ನ ಮಾಡಿದರೂ ಸಾಕು, ಅಪಾರ ಸಾಗರದ ವಿಸ್ತಾರ, ಆಳ, ಗಾಂಭೀರ್ಯ ಹಾಗೂ ಅಗಾಧತೆ ನಮ್ಮ ಮೈನವಿರೇಳಿಸುವುದು. ಬೃಹತ್ತಾದ ಒಂದು ಮಹಾಶಕ್ತಿಯೆದುರು ನಾನೆಂಥ ಕ್ಷುದ್ರಜೀವಿ ಅನ್ನಿಸುವುದು. ಆದರೆ, ಶ್ರೀಮಾತೆಯವರೇ ಹೇಳಿದಂತೆ, ''ನಾನು ಕರುಣೆ ತೋರದ ಯಾವ ಒಬ್ಬ ವ್ಯಕ್ತಿಯೂ ಇಲ್ಲ; ಅಷ್ಟೇಕೆ, ಒಂದು ಕೀಟವೂ ಇಲ್ಲ'' — ಈ ಮಾತಿನ ಹಿಂದಿರುವ ಭಾವವೆಂತಹದು? ಸಮಸ್ತ ಬ್ರಹ್ಮಾಂಡದ, ಎಲ್ಲ ಜೀವಿಗಳ ತಾಯಿ ತಾನು; ಹಾಗಿರುವಾಗ ಭಯವೇಕೆ ಎಂಬ ಭರವಸೆಯಿಲ್ಲವೆ? ಆದ ಕಾರಣ ಈ ದಿವ್ಯ ಮಾತೃಭಾವದ, ಮಹಾಸಾಗರದ ಅಲೆಗಳು ನಮ್ಮ ಕೈಬೀಸಿ ಕರೆಯುತ್ತಿವೆ. ಈ ಅಲೆಗಳ ಅನಂತ ಮಂದ್ರ ಶ್ರುತಿಗೆ ನಾವೂ ಸ್ವರ ಸೇರಿಸೋಣ.

### ಎಂತಹ ಸರಳತೆ ಇವರದು!

ಶ್ರೀಮಾತೆಯವರು ಎಂತಹ ಸರಳ ಜೀವನವನ್ನು ನಡೆಸುತ್ತಿದ್ದರೆಂದರೆ, ಜಗನ್ಮಾತೆಯೇ ಧರೆಗಿಳಿದು ಬಂದಿದ್ದಾರೆ ಎಂಬ ವಿಷಯ ಹೊರನೋಟಕ್ಕೆ ಕಾಣಿಸುತ್ತಿರಲಿಲ್ಲ. ಹಳ್ಳಿಯ ಸಾಮಾನ್ಯ ಹೆಂಗಸರಂತೆ ತರಕಾರಿ ಹೆಚ್ಚುವುದು, ಅಡುಗೆ ಕೆಲಸ, ಮನೆ ಸ್ವಚ್ಛಗೊಳಿಸುವುದು ಮುಂತಾದ ದೈನಂದಿನ ಕೆಲಸಗಳಲ್ಲೇ ಅವರು ಮುಳುಗಿರುತ್ತಿದ್ದರು. ಅನೇಕರು ಅವರನ್ನು ಕಂಡು, 'ಇವರೇ ಶ್ರೀಮಾತೆಯವರು?' ಎಂಬ ಭಾವಿಸುತ್ತಿದ್ದರು. ಅವರ ದರ್ಶನ ಪಡೆಯಲು ಜಯರಾಮಬಾಟಿಗೆ ದೂರದ ಊರುಗಳಿಂದ ಅನೇಕ ಮಂದಿ ಭಕ್ತರು ಬರುತ್ತಿದ್ದರು; ಶ್ರೀಮಾತೆಯವರ ಮೇಲೆ ಅಪಾರ ಭಕ್ತಿ-ಗೌರವಗಳನ್ನು ಅರ್ಪಿಸುತ್ತಿದ್ದರು. ಆದರೂ ಅವರ ಕುಟುಂಬದ ಬಹುಪಾಲು ಮಂದಿ ಅವರನ್ನು 'ನಮ್ಮ ಶಾರದೆ' ಎಂದು ತಿಳಿದುಕೊಂಡಿದ್ದರಲ್ಲದೆ, ಅವರು 'ಜಗನ್ಮಾತೆ'ಯೆಂಬ ಭಾವನೆ ಅವರಿಗೆ ಉಂಟಾಗುತ್ತಿರಲಿಲ್ಲ. ಇನ್ನು ೧೯೧೧ರಲ್ಲಿ ಶ್ರೀಮಾತೆಯವರು ಬೆಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಒಬ್ಬರು ಭಕ್ತೆ ಹಲವು ಮಂದಿ ಹೆಂಗಸರ ನಡುವೆ ಶ್ರೀಮಾತೆಯವರನ್ನು ಗುರುತಿಸಲಾಗದೆ, ಬೇರೊಬ್ಬಳು ಅಲಂಕೃತ ಮಹಿಳೆಯನ್ನೇ ಶ್ರೀಮಾತೆಯೆಂದು ತಿಳಿದು ನಮಸ್ಕರಿಸಿದ ಘಟನೆಯೂ ನಡೆದಿದೆ. ಶ್ರೀಮಾತೆಯವರು ತಮ್ಮ ದಿವ್ಯತೆಯನ್ನು ಸರಳತೆಯ, ಸಾಮಾನ್ಯ ರೂಪದ ಮೂಲಕ ಮುಚ್ಚಿಕೊಂಡಿದ್ದರು. ಇದನ್ನು ಕೆಲವರು 'ಬೂದಿಯಿಂದ ಮರೆಮಾಚಿಕೊಂಡಿರುವ ಬೆಕ್ಕಿನಂತೆ' ಎಂದು ಕರೆದದ್ದಿದೆ. ಆದರೆ ತಮ್ಮ ಜೀವನದ ಮೂಲಕ ಶ್ರೀಮಾತೆ ನಮಗೆ ಕಲಿಸಿಕೊಡುವುದು — ಆಡಂಬರವಿಲ್ಲದ, ಸರಳವಾದ ಜೀವ ನದ ಶ್ರೇಷ್ಠತೆ ಎಂತಹುದು ಎಂಬುದನ್ನು. ದೈವೀನೆಲೆಯ ಅತ್ಯು ನ್ನತ ಹಂತಕ್ಕೇರಿ, ಸಹಸ್ರಾರು ಮಂದಿ ಸಾಧು-ಸಾಧಕ ರಿಂದ ಪೂಜಿಸಲ್ಪಟ್ಟರೂ,

ಸ್ವಲ್ಪವೂ ಅಹಂಕಾರ-ಗರ್ವಗಳಿಲ್ಲದ, ಲಜ್ಜೆ-ವಿನಯ ಸೌಶೀಲ್ಯಗಳ ಮೂರ್ತರೂಪವಾಗಿದ್ದ ಶ್ರೀಮಾತೆ ಯವರನ್ನು ಕಂಡು, 'ಅಬ್ಬಾ, ಎಂತಹ ಸರಳತೆ ಇವರದು!' ಎಂದು ಆಶ್ಚರ್ಯಪಟ್ಟುಕೊಂಡರು. ಶ್ರೀರಾಮಕೃಷ್ಣರು 'ಸರಳತೆ ಯಿಲ್ಲದೆ ಭಗವಂತ ಸಿಗಲಾರ' ಎಂದಿದ್ದರು. ಆದರೆ ಅಂತಹ ಸರಳತೆಯನ್ನು ರೂಢಿಸಿಕೊಳ್ಳುವುದು ಹೇಗೆ ಎಂಬುದನ್ನು ಶ್ರೀಮಾತೆ ಯವರ ಜೀವನವನ್ನು ಕಂಡು ಕಲಿಯಬೇಕು.

## ಪರಿಶುದ್ಧತೆ

ಮನುಕುಲದ ಇತಿಹಾಸದಲ್ಲೇ ಮೊದಲಬಾರಿಗೆ ಎಂಬಂತೆ ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆಯವರ ಪವಿತ್ರ ದಾಂಪತ್ಯ ಜೀವನವು ದಾಖಲಿಸಲ್ಪಟ್ಟಿದೆ. ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ನೆಲೆಗಳಲ್ಲಿ ಸದಾ ಬ್ರಹ್ಮಭಾವದಲ್ಲಿರುತ್ತಿದ್ದ ಶ್ರೀರಾಮಕೃಷ್ಣರ ಮಾರ್ಗದರ್ಶನದಂತೆ ಶ್ರೀಮಾತೆಯವರ ಆಧ್ಯಾತ್ಮಿಕ ಸಾಧನೆ ಮುಂದುವರಿದು, ಅವರು ತಮ್ಮಲ್ಲಿ ಅಂತರ್ಗತವಾಗಿದ್ದ ಜಗನ್ಮಾತೆಯ ದಿವ್ಯವ್ಯಕ್ತಿತ್ವವನ್ನು ಕಂಡುಕೊಂಡರು. ಶ್ರೀರಾಮಕೃಷ್ಣರೇ ಹೇಳಿರುವಂತೆ, ಭೋಗಾಸಕ್ತಿಯಲ್ಲಿ ಮುಳುಗಿಹೋಗಿದ್ದ ಪ್ರಪಂಚಕ್ಕೆ ಆಧ್ಯಾತ್ಮಿಕ ಮಾರ್ಗವನ್ನು ತೋರಿಸಿಕೊಡುವ ಕಾರ್ಯವನ್ನು ಅವರ ನಂತರ ಶ್ರೀಮಾತೆಯವರು ಮುಂದುವರಿಸಬೇಕಾಯಿತು. ಇದಕ್ಕೆ ತಮ್ಮ ಅತ್ಯುಜ್ವಲ ಪಾವಿತ್ರ್ಯವೇ ಪ್ರಥಮ ಅರ್ಹತೆಯಾಗಿತ್ತು; ಅದರಿಂದಲೇ ಅವರು ಎಲ್ಲ ಆಧ್ಯಾತ್ಮಿಕ ಸಾಧಕರಿಗೆ ಜೀವಂತ ಆದರ್ಶವಾಗಿ ನಿಂತರು. ಬೆಳದಿಂಗಳ ರಾತ್ರಿಯಲ್ಲಿ ಶ್ರೀಮಾತೆಯವರು ಚಂದ್ರನನ್ನು ನೋಡಿ, 'ನನ್ನ ಮನಸ್ಸು ಚಂದ್ರನ ಕಿರಣಗಳಂತೆ ಪರಿಶುದ್ಧವಾಗಿರಲಿ' ಎಂದು ಪ್ರಾರ್ಥಿಸುತ್ತಿದ್ದರಂತೆ. ಅದೆಂಥ ಪ್ರಾರ್ಥನೆ! ಮಾನವರೆಲ್ಲರೂ ಇದನ್ನು ನೋಡಿ ಪಾವಿತ್ರ್ಯವನ್ನು ರೂಢಿಸಿಕೊಳ್ಳುವುದನ್ನು ಕಲಿಯಬೇಕು. ಶ್ರೀಮಾತೆ ಮಾರ್ಗದರ್ಶಕರಾದ ಗುರುವೂ ಹೌದು, ಎಲ್ಲ ಆದರ್ಶಗಳ ಲಕ್ಷ್ಯವೂ ಹೌದು.

## ಭಾವ-ಭಕ್ತಿ

ತಮ್ಮ ಜೀವನ ಬೇರೆ, ವ್ಯವಹಾರ ಬೇರೆ, ಸಾಧನೆ ಬೇರೆ, ವಿಚಾರ ಬೇರೆ ಎಂದೆಲ್ಲ ಕೆಲವರು ಭಾವಿಸುತ್ತಾರೆ. ಆದರೆ ಶ್ರೀಮಾತೆಯವರ ಪಾಲಿಗೆ ಎಲ್ಲವೂ ಒಂದೇ. ಶ್ರೀರಾಮಕೃಷ್ಣರು ಹೇಳಿದಂತೆ 'ಮಾತು, ಮನಸ್ಸನ್ನು ಒಂದಾಗಿಸಿದ' ಜೀವನ ಅವರದು. ಸಾಂದರ್ಭಿಕವಾಗಿ ಅವರು ತಮ್ಮ ದಿವ್ಯತೆಯನ್ನು ಪ್ರಕಟಗೊಳಿಸಿದ ಕೆಲವೇ ಉದಾಹರಣೆಗಳನ್ನು ಬಿಟ್ಟರೆ ಉಳಿದ ಸಮಯದಲ್ಲೆಲ್ಲ ಅವರು ಸಾಮಾನ್ಯ ಮಾನವನ ಭಾವವನ್ನೇ ಪ್ರಕಟಗೊಳಿಸುತ್ತಿದ್ದರು. ಆದರೆ ತಮ್ಮ ಅಂತರಂಗದ ಭಾವ, ಭಕ್ತಿ ಹಾಗೂ ಮನೋಧರ್ಮ ಯಾವಾಗಲೂ ಒಂದೇ ಬಗೆಯದಾಗಿರು ತ್ತಿತ್ತು. ಜಪ, ಧ್ಯಾನ, ಪೂಜೆ, ನೈವೇದ್ಯ, ಮಂತ್ರದೀಕ್ಷೆ — ಇತ್ಯಾದಿಗಳಲ್ಲೆಲ್ಲ ಅವರು ಪ್ರಾಧಾನ್ಯತೆ ನೀಡುತ್ತಿದ್ದುದು ಬಾಹ್ಯ ಆಚರಣೆಗಲ್ಲ; ಅಂತರಂಗದ ಭಾವಕ್ಕೆ. ಅವರು ಜಪ ಮಾಡುವ ಬಗ್ಗೆ ಹೀಗೆ ಹೇಳುತ್ತಾರೆ: ''ತುಂಬು ಮನಸ್ಸಿನಿಂದ ಭಗವಂತನ ನಾಮವನ್ನು ಒಂದು ಸಲ ಸ್ಮರಿಸುವುದೂ ಒಂದೇ, ಮನಸ್ಸಿಲ್ಲದೆ ಲಕ್ಷ ಜಪ ಮಾಡುವುದೂ ಒಂದೇ. ನೀನು ದಿನವಿಡೀ ಜಪ ಮಾಡಬಹುದು; ಆದರೆ ಮನಸ್ಸು ಎಲ್ಲೋ ಇದ್ದರೆ ಅಷ್ಟು ಪ್ರಯೋಜನವಾಗದು. ಜಪದಲ್ಲಿ ಏಕಾಗ್ರತೆ ಇರಬೇಕು. ಆಗ ಮಾತ್ರ ಭಗವಂತನ ಕೃಪೆಯಾಗುತ್ತದೆ'' *('ಶ್ರೀನುಡಿ', ಪು.೨೫, ಮೈಸೂರು ಆಶ್ರಮದ ಪ್ರಕಟಣೆ.)* ಅದೇ ರೀತಿ, ಭಕ್ತಿಯಲ್ಲಿ ಭಾವವೇ ಮುಖ್ಯವೆಂಬುದನ್ನು ತಿಳಿಸುತ್ತ ಶ್ರೀಮಾತೆ ಹೇಳುತ್ತಾರೆ: ''ಭಾವದಿಂದಲೇ ಎಲ್ಲವೂ ಲಭ್ಯವಾಗುವುದು. ಭಾವವಿಲ್ಲದೆ ಯಾರು ತಾನೇ ಭಗವಂತನನ್ನು ನೋಡಿದ್ದಾರೆ? ಭಾವವಿಲ್ಲದೆ ಯಾರೊಂದಿಗೆ ಭಗವಂತ ಮಾತನಾಡಿದ್ದಾನೆ? ಭಾವದಲ್ಲೇ ಭಗವಂತನ ದರ್ಶನ, ಅವನೊಂದಿಗೆ ಮಾತುಕತೆ. ಎಲ್ಲವೂ ಭಾವದಲ್ಲೇ ಉಂಟಾಗುವುದು.'' *('ಶ್ರೀಶಾರದಾದೇವಿ ವಚನ ವೇದ', ಪು.೧೪೭, ಮೈಸೂರು ಆಶ್ರಮದ ಪ್ರಕಟಣೆ)* ಇನ್ನೊಮ್ಮೆ ಅವರು ಪ್ರೇಮಾಭಕ್ತಿಯನ್ನು ವಿವರಿಸುತ್ತ ಹೇಳುತ್ತಾರೆ: ''ವೃಂದಾ ವನದ ಗೊಲ್ಲ ಹುಡುಗರು ಶ್ರೀಕೃಷ್ಣನನ್ನು ಜಪ-ಧ್ಯಾನಗಳಿಂದ ಪಡೆದರೆ? ಇಲ್ಲ, ಅವರು , 'ಬಾರೋ, ತನ್ನೋ; ಇದನ್ನು ತೊಗೊಳ್ಳೋ' — ಎನ್ನುತ್ತ, ಅಂಥ ಪ್ರೀತಿಯಿಂದ ತಮ್ಮ ಶ್ರೀಕೃಷ್ಣ ನನ್ನು ಪಡೆದರು.'' *(ಅಲ್ಲೇ, ಪು.೧೪೯)* ಶ್ರೀಮಾತೆಯವರು ಪೂಜೆ, ನೈವೇದ್ಯ ಮಾಡುವಾಗ ಸ್ವತಃ ಭಗವಂತನ (ಅಥವಾ ಶ್ರೀ ರಾಮಕೃಷ್ಣರ) ಸಾನ್ನಿಧ್ಯವನ್ನು ಅನುಭವಿಸಿಕೊಂಡೇ ಎಲ್ಲವನ್ನೂ ನೆರವೇರಿಸುತ್ತಿದ್ದರು. ಆತ್ಮೀಯ ವ್ಯಕ್ತಿಯನ್ನು ಆದರದಿಂದ ಬರಮಾಡಿ ಕೊಂಡು, ಉಪಚರಿಸಿ, ಗೌರವದಿಂದ ಊಟ ಬಡಿಸುವಂತೆ ಭಾವಿ ಸುತ್ತ ಅವರು ನೈವೇದ್ಯ ಮಾಡುತ್ತಿದ್ದರು. ಮಂತ್ರೋಚ್ಚಾರಣೆ ಯೊಂದಿಗೆ ಈ ಬಗೆಯ ಭಾವ ಪೂಜೆಯಲ್ಲಿರಬೇಕು ಎಂದು ಅವರು ತಮ್ಮ ಆಚರಣೆಯ ಮೂಲಕ ತೋರಿಸಿ ಕೊಟ್ಟರು.



ಪೂಜಾನಿರತರಾದ ಶ್ರೀಮಾತೆ

## ಅನುಕಂಪ, ಮಾತೃಹೃದಯ

ಶ್ರೀಮಾತೆಯವರ ಮಾತೃಹೃದಯ ಪ್ರಪಂಚದ ಪ್ರತಿಯೊಬ್ಬ ವ್ಯಕ್ತಿಯ ಮೇಲೂ ಅನುಕಂಪದ, ಕೃಪೆಯ ಪ್ರವಾಹವನ್ನು

ಹರಿಸಿತ್ತು ಎನ್ನುವುದಕ್ಕೆ ಅವರ ಮಾತುಗಳೇ ಪುಷ್ಟಿ ನೀಡುತ್ತವೆ: ''ನನ್ನ ಕರುಣೆಯನ್ನು ಪಡೆಯದವನು ನಿಜಕ್ಕೂ ದುರದೃಷ್ಟವಂತ. ನಾನು ಕರುಣೆ ತೋರದ ಯಾವ ವ್ಯಕ್ತಿಯೂ ಇಲ್ಲ; ಅಷ್ಟೇಕೆ, ಒಂದು ಕೀಟವೂ ಇಲ್ಲ.'' *(ಶ್ರೀನುಡಿ, ಪು. ೩೧)* ಶ್ರೀರಾಮಕೃಷ್ಣರ ನೇರ ಶಿಷ್ಯರಲ್ಲಿ ಮುಂದೆ ಪ್ರಸಿದ್ಧರಾದ ಸ್ವಾಮಿ ವಿವೇಕಾನಂದ, ಬ್ರಹ್ಮಾನಂದರಂತಹವರೂ ಅವರ ಮಕ್ಕಳೇ. ಅದೇ ರೀತಿ ದೀನ-ದಲಿತರು, ದುರ್ಜನರು, ಪದ್ಮಲೋಚನನಂತಹ ಹುಚ್ಚರು, ಅಮ್ಜದ್‌ನಂತಹ ಅನ್ಯಧರ್ಮೀಯರು, ಕಳ್ಳಕಾರರು ಎಲ್ಲರೂ ಅವರ ಮಕ್ಕಳೇ. ಅವರಲ್ಲಿ ಭೇದವನ್ನು ಕಾಣದೆ, ಎಲ್ಲರನ್ನೂ ಸಮಾನವಾಗಿ ಪ್ರೀತಿಸಿದ ಮಾತೃಹೃದಯ ಅವರದು. ಅದರಲ್ಲಿ ಸರ್ವಾತ್ಮಭಾವವನ್ನು ಕಾಣುವ ಭಗವದ್ಗೀತೆಯ ದಿವ್ಯದರ್ಶನವಿದೆ. ಸೃಷ್ಟಿಯ ಚರಾಚರಗಳೆಲ್ಲವೂ ಆದಿಶಕ್ತಿಯ ಇಚ್ಛೆಯಿಂದಲೇ ಉದ್ಭವಿಸಿತು; ಪ್ರಕೃತಿಯೇ ಸೃಷ್ಟಿಯ ಪ್ರತಿಯೊಂದು ಕಣಕಣವನ್ನೂ ವ್ಯಾಪಿಸಿಕೊಂಡಿರುವಳು; ಎಲ್ಲ ಕ್ರಿಯೆಗಳ, ಚಲನೆಯ, ಜಗದ್ವ್ಯಾಪಾರದ ಹಿಂದಿರುವ ಪ್ರೇರಕ ಶಕ್ತಿಯೇ ಜಗನ್ಮಾತೆ — ಅವಳು ಎಲ್ಲ ಜೀವಿಗಳ ಅಂತರ್ಯಾಮಿ. ಈ ತತ್ವವನ್ನು ಶ್ರೀಮಾತೆಯವರ ಜೀವನದಲ್ಲಿ, ಅವರ ಮನೋಧರ್ಮದಲ್ಲಿ ಹಾಗೂ ದೈನಂದಿನ ಆಚರಣೆಯಲ್ಲಿ ಕಾಣಬಹುದಾಗಿದೆ.

### ಕಷ್ಟಸಹಿಷ್ಣುತೆ - ಕಾರ್ಯಕುಶಲತೆ

ಶ್ರೀಮಾತೆಯವರದು ದೈವೀಪ್ರಜ್ಞೆಯ ಸ್ತರಕ್ಕೇರಿದ ವ್ಯಕ್ತಿತ್ವವಾಗಿದ್ದರೂ, ಅವರ ಜೀವನ ಹೂವಿನ ಹಾಸಿಗೆಯದಾಗಿರಲಿಲ್ಲ; ಸಾಮಾನ್ಯ ಜನರಂತೆ ಅವರೂ ಅನೇಕ ಕಷ್ಟ, ತೊಂದರೆಗಳನ್ನು ಎದುರಿಸಬೇಕಾಯಿತು. ಆದರೆ ಯಾವುದೇ ಕಷ್ಟಗಳಿಗೆ ಅವರು ಎದೆಗೆಡಲಿಲ್ಲ; ಬದಲಾಗಿ ಧೈರ್ಯ, ಸಹಿಷ್ಣುತೆ ಹಾಗೂ ಕಾರ್ಯದಕ್ಷತೆಗಳಿಂದ ಅವುಗಳನ್ನು ಪರಿಹರಿಸಿಕೊಂಡರು. ''ಸಾಕ್ಷಾತ್ ಜಗನ್ಮಾತೆಯಾಗಿದ್ದರೂ ನೀವು ಇಷ್ಟೊಂದು ಶ್ರಮಪಡುತ್ತಿರುವಿರಿ. ಇಂತಹ ತೊಂದರೆಗಳಿಗೆ ಒಳಗಾಗುತ್ತೀರಲ್ಲ'' ಎಂದು ಅವರ ಭಕ್ತರಲ್ಲಿ ಕೆಲವರು ಪ್ರಶ್ನಿಸಿದ್ದರು. ಆಗ ಶ್ರೀಮಾತೆ ನೀಡುತ್ತಿದ್ದ ಉತ್ತರವೂ ಅಷ್ಟೇ ಅರ್ಥಗರ್ಭಿತ — ''ನಾನು ಮಾಡುತ್ತಿರುವುದೆಲ್ಲವೂ ನನ್ನ ಮಕ್ಕಳಿಗಾಗಿ.'' ದಿನವಿಡೀ ಎಡೆಬಿಡದೆ ಕೆಲಸ ಮಾಡುತ್ತಿದ್ದರೂ ಶ್ರೀಮಾತೆಯವರು ಒಂದು ಲಕ್ಷಕ್ಕಿಂತ ಹೆಚ್ಚು ಜಪ ಮಾಡುತ್ತಿದ್ದರು. ಇದು ಹೇಗೆ ಸಾಧ್ಯವೆಂದು ಅನೇಕರು ಮೂಗಿನ ಮೇಲೆ ಬೆರಳಿಡುತ್ತಾರೆ. ಸಾಧನೆ ಮಾಡಲು ಮನಸ್ಸು ಮುಖ್ಯ; ಮನಸ್ಸೊಂದಿದ್ದರೆ ಎಲ್ಲವೂ ಅನುಕೂಲಕರವಾಗಿ ಬಂದೊದಗುವುದು ಎಂಬ ಶ್ರೀಮಾತೆಯವರ ಮಾತು ಇದಕ್ಕೆ ಉತ್ತರವಾಗುತ್ತದೆ.

ಶ್ರೀಮಾತೆಯವರು ಕೆಲಸ ಮಾಡುವ ವಿಷಯವಾಗಿ ಹೇಳುತ್ತಾರೆ: ''ಒಬ್ಬ ವ್ಯಕ್ತಿ ಏನೂ ಕೆಲಸ ಮಾಡದೆ ಇದ್ದರೆ ಅವನ ಮನಸ್ಸು ಸರಿಯಾಗಿರಲು ಹೇಗೆ ಸಾಧ್ಯ ? ದಿನದ ಇಪ್ಪತ್ತನಾಲ್ಕು ಗಂಟೆಯೂ ಧ್ಯಾನ-ಚಿಂತನೆಗಳಲ್ಲಿ ತೊಡಗಿರಲು ಯಾರಿಗೂ ಸಾಧ್ಯವಿಲ್ಲ. ಆದ್ದರಿಂದ ಕೆಲಸ ಮಾಡಲೇಬೇಕು. ಇದರಿಂದ ಮನಸ್ಸು ಲವಲವಿಕೆಯಿಂದ ಇರುತ್ತದೆ.'' ಈ ಮಾತುಗಳನ್ನು ಶ್ರೀಮಾತೆಯವರು ಹೇಳಿರುವುದು ಸಾಧಕರಿಗೋಸ್ಕರ. ಎಲ್ಲವನ್ನೂ ಭಗವಂತನಿಗೋಸ್ಕರ ಸಮರ್ಪಿಸಿದವರೂ ಕೂಡ ಕರ್ಮ ಮಾಡಲೇಬೇಕು; ಅದರಿಂದಲೇ ಕರ್ಮಬಂಧನದಿಂದ ಬಿಡುಗಡೆಯಾಗುವುದು ಎಂದು ಶ್ರೀಮಾತೆ ಹೇಳುತ್ತಾರೆ. ಸ್ವತಃ ತಾವೇ ಅಚ್ಚುಕಟ್ಟಾಗಿ, ದಕ್ಷತೆಯಿಂದ ಹಾಗೂ ಅತ್ಯಂತ ಕ್ಷಿಪ್ರವಾಗಿ ಕೆಲಸ ಮಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ಕೆಲಸ ಮಾಡುವ ವಿಧಾನ ಹೇಗಿರಬೇಕು ಎಂದು ಶ್ರೀಮಾತೆ ಹೇಳುತ್ತಾರೆ: ''ಎಚ್ಚರಿಕೆಯಿಂದ ಕೆಲಸ ಮಾಡುವವರು ಬೇಕು. ಯಾವುದೋ ಆವೇಶದಿಂದ ಶ್ರೇಷ್ಠವಾದುದನ್ನು ಸಾಧಿಸುವವರಿದ್ದಾರೆ. ಆದರೆ ಪ್ರತಿಯೊಂದು ಕೆಲಸವನ್ನೂ ಅದರ ಸಣ್ಣಪುಟ್ಟ ವಿವರಗಳಿಗೆ ಗಮನ ಕೊಟ್ಟು ಮಾಡುವವನೇ ಶ್ರೇಷ್ಠ.''

''ಒಂದು ವಸ್ತು ಎಷ್ಟೇ ಕ್ಷುಲ್ಲಕವೆನಿಸಿದರೂ ಅದನ್ನು ಅಲಕ್ಷ್ಯ ಮಾಡಬಾರದು. ಪ್ರತಿಯೊಂದಕ್ಕೂ ಅದಕ್ಕೆ ಸಲ್ಲಬೇಕಾದ ಗೌರವವನ್ನು ಸಲ್ಲಿಸಬೇಕು. ಒಂದು ಪೊರಕೆಯನ್ನೂ ಗೌರವದಿಂದ ಕಾಣಬೇಕು. ತೀರ ಸಣ್ಣ ಕೆಲಸವನ್ನೂ ಕೂಡ ಗೌರವದಿಂದ ಮಾಡಬೇಕು.'' *(ಶ್ರೀನುಡಿ, ಪು.೧೮-೧೯)*

ರತ್ನದಂತಹ ಮಾತುಗಳಿವು. ಜೀವನದಲ್ಲಿ ಪ್ರತಿಯೊಂದನ್ನೂ ಗೌರವದಿಂದ, ಮರ್ಯಾದೆಯಿಂದ ಮಹತ್ವ ಕೊಟ್ಟು ನೋಡುವವನಿಗೆ ಮಾತ್ರವೇ ಈ ರೀತಿಯ ಮನೋಭಾವ ಬರಲು ಸಾಧ್ಯ. ಪ್ರತಿಯೊಂದು ಕಣಕ್ಕೂ, ಕ್ಷಣಕ್ಕೂ ಪ್ರಪಂಚದಲ್ಲಿ ಸ್ಥಾನವಿದೆ; ಅದನ್ನು ಲಘುವಾಗಿ ಕಾಣದೆ ಸೂಕ್ತ ಗೌರವ-ಮಹತ್ವ ಕೊಟ್ಟು ಕೆಲಸ ಮಾಡಬೇಕೆಂಬುದು ಶ್ರೀಮಾತೆಯವರ ಉಪದೇಶ. ಪ್ರತಿಯೊಬ್ಬ ವ್ಯಕ್ತಿಯೂ ಬಾಲ್ಯದಿಂದಲೇ ರೂಢಿಸಿಕೊಳ್ಳಬೇಕಾದ ಮನೋಭಾವ ಇದಾಗಿದೆ.

### ಸರ್ವಸಮಭಾವ

ಸಮದರ್ಶಿಯಾದ ಯೋಗಿಯು ಎಲ್ಲದರಲ್ಲಿಯೂ ಆತ್ಮನನ್ನೇ ಕಾಣುತ್ತಾನೆ ಎಂಬ ಭಗವದ್ಗೀತೆಯ ಉಕ್ತಿಗೆ ಅತ್ಯುತ್ತಮ ಉದಾಹರಣೆಯಾಗಿದ್ದಾರೆ ಶ್ರೀಮಾತೆಯವರು. ಭಗವದ್ದರ್ಶನದಿಂದ ವಿಶಾಲಗೊಂಡ ಅವರ ದೃಷ್ಟಿಕೋನ ಪ್ರಪಂಚವ್ಯಾಪಕವಾಗಿ, ಮನುಷ್ಯ-ಪಶು-ಪಕ್ಷಿ-ಕೀಟ-ಪತಂಗಾದಿಗಳಿಂದ ಹಿಡಿದು, ಜಡವಸ್ತುಗಳವರೆಗೂ ಸಕಲ ವಸ್ತುಗಳಲ್ಲಿ ಭಗವಂತನನ್ನು ದರ್ಶಿಸುತ್ತಿತ್ತು. ಈ ಕಾರಣದಿಂದಲೇ ಅವರಿಗೆ ಜಾತಿ-ಸಂಪ್ರದಾಯ-ವಿಧಿನಿಯಮಗಳ ಕಟ್ಟುಪಾಡನ್ನು ದಾಟಿ, ಸಮಸ್ತ ಸೃಷ್ಟಿಯ ಐಕ್ಯತೆಯನ್ನು ಕಾಣುವುದು ಸಾಧ್ಯವಾಯಿತು.

ಜಾತಿಭೇದ, ಲಿಂಗಭೇದ, ವರ್ಣಭೇದ ಇವುಗಳನ್ನು ಮೀರಿ

ಶ್ರೀಮಾತೆಯವರು ಎಲ್ಲರನ್ನು ಸ್ವೀಕರಿಸಿದರು, ನಿಜ. ಆದರೆ, ಅದರರ್ಥ ಅವರು ಎಲ್ಲ ಕಟ್ಟುಪಾಡುಗಳನ್ನೂ ಧಿಕ್ಕರಿಸಿದರು ಎಂದಲ್ಲ. ಸಂಪ್ರದಾಯದ ವಾತಾವರಣದಲ್ಲಿ ಇದ್ದುಕೊಂಡು, ಎಲ್ಲ ವಿಧಿನಿಯಮಗಳನ್ನೂ ಪಾಲಿಸಿಕೊಂಡು ಅವರು ತಮ್ಮ ವಿಶಾಲ ದೃಷ್ಟಿಯನ್ನು ಪ್ರಪಂಚದತ್ತ ಬೀರಿದರು. ಇದು ಅವರ ವಿಶೇಷತೆ. ಶ್ರೀರಾಮಕೃಷ್ಣರ ಬಗ್ಗೆ ಮಾತನಾಡುತ್ತ ಅವರು ಸ್ವಾಮಿ ವಿವೇಕಾನಂದರಿಗೆ ಹೇಳಿದ್ದರು, ''ನೋಡು ಮಗೂ, ಠಾಕೂರ್ (ಶ್ರೀರಾಮಕೃಷ್ಣರು) ಯಾವುದನ್ನೂ ಧ್ವಂಸಮಾಡಲು ಬಂದವರಲ್ಲ ; ಎಲ್ಲವನ್ನೂ ಪೂರ್ಣಗೊಳಿಸಲು ಬಂದವರು.'' ಇದು ಶ್ರೀಮಾತೆಯವರು ಹೊಂದಿದ್ದ ಮನೋಭಾವ. ಯುಗಯುಗಾಂತರಗಳಿಂದ ಮುಂದುವರಿದುಕೊಂಡು ಬಂದಿದ್ದ ಧಾರ್ಮಿಕ, ಸಾಂಪ್ರದಾಯಿಕ ನಂಬಿಕೆ, ಆಚರಣೆಗಳನ್ನು ಅಲ್ಲಗಳೆಯದೆಯೇ ಅವುಗಳ ಅಂತಃಸತ್ವವನ್ನು ವೃದ್ಧಿಗೊಳಿಸಿದರು. ಇದು ಸಮಾಜ, ಸಂಸ್ಕೃತಿಯ ದೃಷ್ಟಿಯಿಂದ ಅದ್ವಿತೀಯವಾದ ಧೋರಣೆಯಾಗಿದೆ. ಬದಲಾವಣೆ ಅಂತರಂಗದಿಂದಲೇ ನಡೆಯುವುದು; ಯಾವುದೇ ಕ್ರಾಂತಿ, ಹೋರಾಟ, ಧ್ವಂಸಕಾರ್ಯಗಳಿಂದಲ್ಲ. ಸಮಾಜ ಇಂತಹ ಸಹಜ ಬದಲಾವಣೆಯನ್ನು ಸ್ವೀಕರಿಸುವುದು; ಅದು ಇನ್ನಷ್ಟು ಶಕ್ತಿಯುತವಾಗುವುದು. ಇಂತಹ 'ಪುನರುಜ್ಜೀವನ' ಕಾರ್ಯದಲ್ಲಿ ದೃಷ್ಟಿವೈಶಾಲ್ಯವಿದೆ, ಎಲ್ಲವನ್ನೂ ಒಳಗೊಳ್ಳುವ ಹಾಗೂ ಸ್ವೀಕರಿಸುವ ಭಾವಪಕ್ವತೆಯಿದೆ. ಶ್ರೀಮಾತೆಯವರ ಈ ಬಗೆಯ ದೃಷ್ಟಿಕೋನ ಎಷ್ಟು ಪ್ರಬುದ್ಧವಾಗಿತ್ತು ಎಂದು ನೆನೆಯುವಾಗ ಆಶ್ಚರ್ಯವಾಗದಿರದು.

## ಬುದ್ಧಿಶಕ್ತಿ, ವಿವೇಕ

ಶ್ರೀಮಾತೆಯವರ ಜೀವನದುದ್ದಕ್ಕೂ ಸರಳ, ಸಾಧಾರಣ, ಮಹಿಳೆಯ ಜೀವನಕ್ರಮವನ್ನು ನಾವು ಕಾಣುತ್ತೇವೆ, ನಿಜ. ಆದರೆ ಅವರ ವ್ಯಕ್ತಿತ್ವವನ್ನು ಪ್ರತ್ಯೇಕವಾಗಿ ಗಮನಿಸಿದರೆ, ಅವರು ಅಪಾರ ಬುದ್ಧಿಶಕ್ತಿಯನ್ನು ಹೊಂದಿದ್ದುದನ್ನು ಕಾಣಬಹುದು. ಹಲವು ಬಾರಿ ಗುರುತರವಾದ ಸಮಸ್ಯೆ ಉದ್ಭವಿಸಿದಾಗ, ಶ್ರೀಮಾತೆಯವರು ನೀಡುತ್ತಿದ್ದ ತೀರ್ಮಾನ ಎಷ್ಟೊಂದು ಪ್ರಾಯೋಗಿಕ ಹಾಗೂ ನಾಜೂಕಿನದಾಗಿತ್ತು ಎಂದು ಅರ್ಥವಾಗುತ್ತದೆ. ತಮ್ಮಂದಿರ ಸಂಸಾರವನ್ನು ಅವರು ನಿಭಾಯಿಸುತ್ತಿದ್ದಾಗ, ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯಂದಿರು ತಮ್ಮ ಸಲಹೆ, ಅಭಿಪ್ರಾಯಗಳನ್ನು ಕೇಳುತ್ತಿದ್ದಾಗ, ಶ್ರೀಮಾತೆಯವರು ಹೇಳುತ್ತಿದ್ದ ಮಾತುಗಳು ಅಂತಿಮವಾಗಿರುತ್ತಿದ್ದವು. ಅವರು ಶ್ರೀರಾಮಕೃಷ್ಣರ ಸಹಧರ್ಮಿಣಿ ಎಂಬ ಅಧಿಕಾರದಿಂದ ಈ ರೀತಿಯಾಗುತ್ತಿದ್ದುದಲ್ಲ; ಆದರೆ ಅವರ ಮಾತುಗಳ ಹಿಂದೆ ಎಂತಹ ವಿವೇಚನೆ, ತರ್ಕ ಇರುತ್ತಿತ್ತು ಎಂದರೆ, ಅದನ್ನು ಯಾರಿಗೂ ಅಲ್ಲಗಳೆಯಲಾಗುತ್ತಿರಲಿಲ್ಲ. ಒಂದು ಸಂದರ್ಭದಲ್ಲಿ ಸೇವಾಕಾರ್ಯ ನಡೆಸಲು ಆರ್ಥಿಕ ಅಭಾವವುಂಟಾಗಿ, ಬೇಲೂರು ಮಠದ ಜಮೀನನ್ನೇ ಮಾರಿಬಿಡಲು ಸ್ವಾಮಿ ವಿವೇಕಾನಂದರು ತೀರ್ಮಾನಿಸಿದರು. ಈ ವಿಷಯವನ್ನರಿತ ಶ್ರೀಮಾತೆ ಹಾಗೆ ಮಾಡದಿರಲು ಸೂಚನೆ ನೀಡಿದರು. ಕಾರಣ, ಬೇಲೂರು ಮಠದ ನಿರ್ಮಾಣವಾದುದು ಶ್ರೀರಾಮಕೃಷ್ಣರ ಇಚ್ಛೆಯ ಪ್ರಕಾರ. ಆದಕಾರಣ ಅದನ್ನು ಮಾರುವುದು ಸೂಕ್ತವಲ್ಲ ಎಂದರು. ಸ್ವಾಮೀಜಿ ಇದಕ್ಕೆ ಒಪ್ಪಲೇಬೇಕಾಯಿತು. ಶ್ರೀಮಾತೆಯವರ ಬುದ್ಧಿಶಕ್ತಿ ಎಷ್ಟು ಪ್ರಖರವಾಗಿತ್ತು ಎಂಬುದನ್ನು ಇದು ಸೂಚಿಸುತ್ತದೆ.

ಇನ್ನೊಂದು ಸಂದರ್ಭದಲ್ಲಿ ವೈದ್ಯರೊಬ್ಬರು ಶ್ರೀಮಾತೆಯವರಿಗೆ ಪ್ರಣಾಮ ಸಲ್ಲಿಸಿ, ತನ್ನ ವೃತ್ತಿಜೀವನವದಲ್ಲಿ ಏಳಿಗೆಯಾಗುವಂತೆ ಆಶೀರ್ವದಿಸಲು ಕೇಳಿಕೊಂಡರು. ಅದಕ್ಕೆ ನಿರಾಕರಿಸಿದ ಶ್ರೀಮಾತೆ, ''ನಿನಗೆ ಏಳಿಗೆಯಾಗಲಿ ಎಂದರೆ, ಜನರಿಗೆ ರೋಗ ವೃದ್ಧಿಯಾಗಲಿ ಎಂದು ನಿನ್ನ ಅಭಿಪ್ರಾಯವೇ? ನಾನೆಂದಿಗೂ ಹಾಗೆ ಆಶೀರ್ವಾದ ಮಾಡಲಾರೆ'' ಎಂದರು. ಅಂದರೆ ವೈದ್ಯರಿಗೆ ಒಳ್ಳೆಯದಾಗಬಾರದು ಎಂಬ ಉದ್ದೇಶ ಶ್ರೀಮಾತೆಯವರದಲ್ಲ, ಆದರೆ ಹಲವರು ರೋಗದಿಂದ ನರಳುವಂತಾಗಬಾರದು ಎಂಬುದಷ್ಟೇ ಅವರ ಇಂಗಿತವಾಗಿತ್ತು. ತಾವು ಆಡಿದ ಪ್ರತಿಯೊಂದು ಮಾತೂ ನಿಜವಾಗುವುದು ಎಂಬ ಅರಿವಿದ್ದ ಶ್ರೀಮಾತೆಯವರು ತಮ್ಮ ಆಲೋಚನೆ, ಮಾತುಗಳ ವಿಷಯದಲ್ಲಿ ಬಹಳ ಎಚ್ಚರದಿಂದಿದ್ದರು. ಈ ಉದಾಹರಣೆಗಳಲ್ಲಿ ಶ್ರೀಮಾತೆಯವರ ವಿಭಿನ್ನ ದೃಷ್ಟಿಕೋನ, ವಿವೇಕಪೂರ್ಣವಾದ ಚಿಂತನೆ ಎಷ್ಟೊಂದು ವಿಭಿನ್ನವಾಗಿದೆ ಎಂಬುದು ಮುಖ್ಯ.

## ಮನುಕುಲದ ಗುರು, ತಾಯಿ

ಸಾಮಾನ್ಯವಾಗಿ ಎಲ್ಲರಿಗೂ 'ತಾಯಿಯೇ ಮೊದಲ ಗುರು' ಎಂಬ ಮಾತು ಬಹಳ ಶ್ರೇಷ್ಠವಾದುದಾಗಿ ಕಂಡುಬರುತ್ತದೆ. ಆದರೆ ಭಗವಂತನ ಮಾತೃರೂಪದ ಆವಿರ್ಭಾವ ಹಲವು ದೃಷ್ಟಿಗಳಿಂದ ಅಪೂರ್ವವಾದುದು. ಶ್ರೀಮಾತೆಯವರಲ್ಲಿ ಈ ಆವಿರ್ಭಾವ ಪರಿಪೂರ್ಣವಾಗಿತ್ತು. ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವ ಪ್ರಕೃತಿಯೂ, ಸಮಸ್ತ ಜೀವಿಗಳ ಅಂತರಂಗದಲ್ಲಿ ಅಡಗಿರುವ ಆದಿಪರಾಶಕ್ತಿಯೂ, ತನ್ನೆಲ್ಲ ಸೃಷ್ಟಿಯನ್ನು ಮುನ್ನಡೆಸುವ ಚೈತನ್ಯರೂಪಿಣಿಯೂ ಆಗಿರುವ ಜಗನ್ಮಾತೆ ಈ ಆಧುನಿಕ ಯುಗದಲ್ಲಿ ಶ್ರೀಶಾರದಾದೇವಿಯಾಗಿ ಅವತರಿಸಿದ್ದಾಳೆ. ಈ ಆವಿರ್ಭಾವದಲ್ಲಿ ಅವರು ಜಗತ್ತಿಗೆ ತೋರಿಸಿಕೊಟ್ಟಿರುವುದು ತಮ್ಮ ದೈವೀ ಮಾತೃವಾತ್ಸಲ್ಯವನ್ನು;

### ಡಿಸೆಂಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧೨ | ಭಾನುವಾರ | ಸ್ವಾಮಿ ಪ್ರೇಮಾನಂದ ಜಯಂತಿ |
| ೧೪ | ಮಂಗಳವಾರ | ಏಕಾದಶಿ |
| ೨೪ | ಶುಕ್ರವಾರ | ಕ್ರಿಸ್‌ಮಸ್ ಈವ್ |
| ೨೬ | ಭಾನುವಾರ | ಶ್ರೀಶಾರದಾದೇವಿ ಜಯಂತಿ |
| ೩೦ | ಗುರುವಾರ | ಏಕಾದಶಿ,<br>ಸ್ವಾಮಿ ಶಿವಾನಂದ ಜಯಂತಿ |